





**ಗಿರಿ:** ಅರವಿಂದ ನಮಗೆ ಎಲ್ಲಿ ಗೌರವ ಸಿಗುವುದಿಲ್ಲವೋ, ಅಲ್ಲಿಗೆ ಹೋಗಬಾರದು, ಏನಂತಿಯಾ?
**ಅರವಿಂದ:** ಹೌದು, ಹಾಗಾದರೆ ನೀನು ನಿಮ್ಮನೆಗೆ ಹೋಗೋ ಹಾಗೆಯೇ ಇಲ್ಲ.

**ಪ್ರವೀಣ:** ರವಿ, ಆ ಪತ್ತೇದಾರಿ ಸಿನಿಮಾ ಅದ್ಭುತವಾಗಿತ್ತು ಅಂತಿದ್ದೀಯಲ್ಲ, ಅದು ಹೇಗೆ ಅದ್ಭುತ ಸಿನಿಮಾ ಅಂತ ಹೇಳು?
**ರವಿ:** ಆ ಪತ್ತೇದಾರಿ ಸಿನಿಮಾದಲ್ಲಿ ಕೊಲೆ ಮಾಡಿದ ವ್ಯಕ್ತಿ ಯಾರು ಅಂತ ಸಿನಿಮಾ ಮುಗಿದ ಮೇಲೂ ಗೊತ್ತಾಗೋದೆ ಇಲ್ಲ ನೋಡು.

**ಹರ್ಷ:** ಜ್ಯೋತಿಷಿಗಳೇ, 45 ವಾರ ಪತ್ರಿಕೆಗಳಿಗೆ ಭವಿಷ್ಯ ಬರೀತಾ ಇದ್ದೀರಲ್ಲ, ನಿಮಗೆ ಸಮಯ ಸಾಕಾಗುತ್ತಾ?
**ಜ್ಯೋತಿಷಿ:** ಖಂಡಿತ ಸಾಕಾಗುತ್ತೆ, ಈ ವಾರ ಒಂದು ಪತ್ರಿಕೆಗೆ ಬರೆದಿರುವುದನ್ನು ಇನ್ನೊಂದು ವಾರ ಇನ್ನೊಂದು ಪತ್ರಿಕೆಗೆ ಅಲ್ಪ ಸ್ವಲ್ಪ ಬದಲಾವಣೆ ಮಾಡಿ ಕಳುಹಿಸಿಕೊಡುತ್ತೇನೆ. ಇದೇ ಪ್ರತಿವಾರವೂ ಮುಂದುವರೆಸುತ್ತೇನೆ.

**ಬಾಸ್:** ನೀವು ಗಂಟೆಗಳ ಲೆಕ್ಕಾಚಾರ ಮಾಡದೆ ನಮ್ಮ ಸಂಸ್ಥೆಯಲ್ಲಿ ದುಡಿಯುವುದಕ್ಕೆ ಆಗುತ್ತಾ?
**ಅಭ್ಯರ್ಥಿ:** ಆಗುತ್ತೆ ಸರ್, ಆದರ ನನ್ನ ಸಂಬಳವನ್ನು ನೀವು ಬರೀ ಸಾವಿರದ ಕಡೆ ಲಕ್ಷ್ಯ ಹರಿಸದೆ, ಲಕ್ಷಗಳ ಕಡೆ ಲಕ್ಷ್ಯ ಹರಿಸಿದರೆ ಮಾತ್ರ.

**ಆತ:** ನನ್ನ ಹೆಂಡತಿ ಯಾವಾಗಲೂ ನೂರು ರೂಪಾಯಿ ಕೊಡಿ ಅಂತಿರ್ತಾಳೆ.
**ಈತ:** ಅದನ್ನು ತೆಗೆದುಕೊಂಡು ಏನು ಮಾಡ್ತಾಳೆ?
**ಆತ:** ಗೊತ್ತಿಲ್ಲ, ಮದುವೆಯಾದ ದಿನದಿಂದ ಇದುವರೆಗೆ ನಾನು ದುಡ್ಡೇ ಕೊಟ್ಟಿಲ್ಲ.

**ಪತ್ನಿ:** ರೀ... ನನಗೇನಾದರೂ ಮೋಹಿನಿಯಂಥ ದೆವ್ವ ಹಿಡಿದರೆ ನೀವೇನು ಮಾಡ್ತೀರಿ?
**ಪತಿ:** ಸುಮ್ನಿರಮ್ಮ ನೀನು. ಏನೇನೋ ಹೇಳಿ ಭಯಪಡಿಸಬೇಡ. ಈಗಾಗ್ಲೆ ಇರೋ ಒಂದು ದೆವ್ವದ ಕಾಟನೇ ಸಹಿಸಿಕೊಳ್ಳೋಕೆ ಆಗ್ತಿಲ್ಲ. ಅದರ ಮೇಲೆ ಇನ್ನೊಂದು ದೆವ್ವದ ಕಥೆ ಹೇಳ್ಬೇಡ.

**ಪ್ರಿಯಕರ:** ಪ್ರಿಯೆ, ನಾನು ನಿನಗೋಸ್ಕರ ನಮ್ಮಪ್ಪನ ಆಸ್ತಿಯನ್ನೆಲ್ಲ ಬಿಟ್ಟು ಬಂದಿದ್ದೇನೆ.
**ಪ್ರೇಯಸಿ:** ನಾನೂ ಅಷ್ಟೆ. ನಮ್ಮಪ್ಪನಿಗೋಸ್ಕರ ನಿನ್ನನ್ನೇ ಬಿಟ್ಟು ಹೋಗ್ತಾ ಇದ್ದೀನಿ, ಕ್ಷಮಿಸು.

**ಸುಬ್ಬ:** ಹಣ ತೆಗೆದುಕೊಂಡು, ಯಾವ ಪಕ್ಷಕ್ಕೆ ಓಟು ಹಾಕ್ತೀಯಾ?
**ಮಬ್ಬ:** ಹಣ ಕೊಡದ ಪಕ್ಷಕ್ಕೆ.

**ಶೀನ:** ಯಾಕೋ ನಾಣಿ, ರಜಾ ಹಾಕಿ, ಮತ್ತೆ ಕೆಲಸಕ್ಕೆ ಬಂದಿದ್ದೀಯ?
**ನಾಣಿ:** ರಜಾ ಹಾಕಿದ್ದು ನಿಜ. ಆದರೆ, ಮನೆ ಕೆಲಸ ನೆನಪಾಯ್ತು. ಆ ಕೆಲಸ ಮಾಡುವುದಕ್ಕಿಂತ ಇಲ್ಲಿಯೇ ಆರಾಮವಾಗಿ ಕೆಲಸ ಮಾಡಬಹುದು ಅಂತ ಬಂದೆ.

**ಕೃಷ್ಣ:** ಶಿವಣ್ಣ, ಕೆಲವರು ಪ್ರಪಂಚವೇ ಶೂನ್ಯ ಅಂತಿರ್ತಾರಲ್ಲ ಏಕೆ?
**ಶಿವಣ್ಣ:** ಅವರಿಗೆ ಆಗಾಗ ಗಣಿತದಲ್ಲಿ ತಾವು ತೆಗೆದುಕೊಂಡ ಅಂಕ ಒತ್ತರಿಸಿ ಬರುತ್ತಿರಬೇಕು.

ಸಂಗ್ರಹ: ಶಂಕರೇಗೌಡ ತುಂಬಕೆರೆ, ಮಂಡ್ಯ